AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ಕುಂ. ವೀರಭದ್ರಪ್ಪ ಅವರ ಕಾದಂಬರಿಗಳು : ಪ್ರತಿಭಟನೆಯ ಹೊಸ ಸಾಧ್ಯತೆಯ ಶೋಧ

**ಡಾ. ಮಲ್ಲಯ್ಯ ಸಂಡೂರು**
ಅಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಸ್ನಾತಕೋತ್ತರ ಕೇಂದ್ರ, ಜ್ಞಾನ ಸರೋವರ, ನಂದಿಹಳ್ಳಿ, ಸಂಡೂರು–೫೮೩೧೧೯

ಪ್ರತಿಭಟನೆ ಬದುಕಿನ ಹೋರಾಟದಲ್ಲಿ ಅನಿವಾರ್ಯವಾಗಿದೆ. ಎಲ್ಲಿಯವರೆಗೆ ಅಸಮಾನತೆಯ ವ್ಯವಸ್ಥೆ ಇರುತ್ತದೆಯೋ ಅಲ್ಲಿಯವರೆಗೆ ಪ್ರತಿಭಟನೆ ಇದ್ದೇ ಇರುತ್ತದೆ. ಮನುಷ್ಯನಿಗೆ ತನ್ನ ಬಗೆಗೆ ತನಗೆ ಗೌರವ ಅಭಿಮಾನ ಇದ್ದಾಗ ಮಾತ್ರ ಪ್ರತಿಭಟನೆ ಸಾಧ್ಯವಾಗುತ್ತದೆ. 'ಸ್ವಾತಂತ್ರ ಮತ್ತು ಸಮಾನತೆಯನ್ನು ಬಯಸದವರು ಎಂದೂ ಪ್ರತಿಭಟಿಸಲಾರರು. ಪ್ರತಿಭಟನೆ ಮತ್ತು ಸ್ವೀಕಾರ ಎರಡೂ ಒಟ್ಟೊಟ್ಟಿಗೆ ಸಾಗುತ್ತವೆ' ಎಂದು ಆಲ್ಬರ್ಟ್ ಕಾಮು ಹೇಳುತ್ತಾನೆ. ಈ ಮಾತು ಬಹಳ ಮಹತ್ವದೆನಿಸುತ್ತದೆ. ನಿರಂತರ ಪ್ರತಿಭಟನೆ ಮಾಡುತ್ತಾ ಹೋಗುವುದೇ ಜೀವನವಲ್ಲ. ಹಾಗೆ ನೋಡಿದರೆ ಹೊಂದಾಣಿಕೆ ಮತ್ತು ಪ್ರತಿಭಟನೆಯ ಸಂಯೋಜನವೇ ಜೀವನ. ಸುಖ–ದುಃಖಗಳನ್ನು ಜೊತೆ ಜೊತೆಯಾಗಿಸಿದಂತೆ ಪ್ರತಿಭಟನೆ ಮತ್ತು ವಾಸ್ತವದ ಬದುಕುಗಳನ್ನು ಒಟ್ಟೊಟ್ಟಿಗೇ ಸ್ವೀಕರಿಸಬೇಕಾಗುತ್ತದೆ.

ಕೆಲವೊಮ್ಮೆ ಜೀವನ ವಿಧಾನದಲ್ಲಿರಲಾರದ ಪ್ರತಿಭಟನೆ ಅನೇಕ ಸಂದರ್ಭಗಳಲ್ಲಿ ಕಲೆ–ಕಾವ್ಯ–ಸಾಹಿತ್ಯಗಳಲ್ಲಿ ಕಾಣಿಸಿಕೊಂಡಿದೆ. ಸಮಾಜ ವ್ಯವಸ್ಥೆಯ ಮನಸ್ಸಿನ ತುಡಿತಗಳು ಕವಿ–ಕೃತಿ ಮಾಧ್ಯಮ ಮೂಲಕ ಸಾಹಿತ್ಯದಲ್ಲಿ ಅನೇಕ ಆಲೋಚನೆಗಳು ಮೂಡಿಸಿವೆ. ರಾಮಾಯಣ, ಮಹಾಭಾರತದ ಕೃತಿಗಳಲ್ಲೇ ಒಂದರಲ್ಲಿ ಸ್ವೀಕಾರ–ಆದರ್ಶ ಪ್ರಧಾನವಾದರೆ, ಮತ್ತೊಂದರಲ್ಲಿ ಪ್ರತಿಭಟನೆ–ವಾಸ್ತವ ಮುಖ್ಯವಾಗುತ್ತವೆ. ಕನ್ನಡ ಸಾಹಿತ್ಯದಲ್ಲಿ ಸಹ ಪ್ರತಿಭಟನೆಯ ಅನೇಕ ಅಂಶಗಳಿವೆ. ಪ್ರತಿಭಟನೆ ಚಾಲಕಶಕ್ತಿಯಾಗಿ ಸಾಹಿತ್ಯದಲ್ಲಿ ಕಾಣಿಸಿಕೊಂಡಿದೆ. ಜೈನ, ವಚನ, ದಾಸ ಮತ್ತು ಆಧುನಿಕ ಕನ್ನಡ ಸಾಹಿತ್ಯದಲ್ಲಿ ದೈವಿಕ ಸಂಸ್ಕೃತಿಯ ವಿರುದ್ಧ ಪುಟಿದೆದ್ದ ಪ್ರತಿಭಟನೆಗಳಾಗಿವೆ. ಪ್ರತಿಭಟನೆಗಳಲ್ಲಿ ಎರಡು ಆಯಾಮಗಳಿವೆ. ಒಂದು, ಸಾಮಾಜಿಕ ಪ್ರತಿಭಟನೆ; ಮತ್ತೊಂದು, ಸಾಹಿತ್ಯಕ ಪ್ರತಿಭಟನೆ. ವಚನ ಸಾಹಿತ್ಯ, ದಲಿತ–ಬಂಡಾಯ ಸಾಹಿತ್ಯದಲ್ಲಿ ಸಾಹಿತ್ಯಕ ಪ್ರತಿಭಟನೆ ಮತ್ತು ಸಾಮಾಜಿಕ ಪ್ರತಿಭಟನೆಯೂ ಇದೆ. ಇವೆರಡರಲ್ಲಿ ಕ್ರಮವಾಗಿ ಒಂದು, ಧರ್ಮಪರ ಆಶಯ ಪ್ರಧಾನವಾದರೆ; ಮತ್ತೊಂದರಲ್ಲಿ ಜನಪರ ಆಶಯ ಮುಖ್ಯವಾಗುತ್ತದೆ. ಸಾಹಿತ್ಯಕ ಪ್ರತಿಭಟನೆ ಸಾಮಾಜಿಕ ಪ್ರತಿಭಟನೆಗೆ ಒಂದು ಪೂರಕ ಅಂಶವಾದರೆ, ಸಾಮಾಜಿಕ ಪ್ರತಿಭಟನೆ ಮಾತ್ರ ಹೆಚ್ಚು ಮುಖ್ಯವಾಗುತ್ತದೆ. ಕ್ರಾಂತಿ, ಚಳುವಳಿ, ಸತ್ಯಾಗ್ರಹಗಳ ಕ್ರಿಯೆಗಳಲ್ಲಿ ವ್ಯತ್ಯಾಸವಿದ್ದರೂ ಇವೆಲ್ಲವುಗಳಿಗೂ ಪ್ರತಿಭಟನೆಯೇ ಸ್ಥಾಯಿಯಾಗಿದೆ.

ಯಾವುದೇ ಜೀವಿಯು ತನ್ನ ಅಸ್ತಿತ್ವಕ್ಕಾಗಿ ಯಾವುದೇ ಸಂದರ್ಭದಲ್ಲಿ ತನ್ನ ಮೇಲೆ ನಡೆಯುವ ದಬ್ಬಾಳಿಕೆಗೆ ಅಥವಾ ಆ ವ್ಯವಸ್ಥೆಗೆ ಪ್ರತಿರೋಧವನ್ನು ಒಡ್ಡುವಂತದ್ದೇ ಪ್ರತಿಭಟನೆಯಾಗಿದೆ. ಸಮಾಜಜೀವಿಯಾದ ಮಾನವ ಸದಾ ಒಂದಲ್ಲ ಒಂದು ಕಾರಣಕ್ಕೆ ಪ್ರತಿಭಟನೆಯ ಹಾದಿಯನ್ನು ಹಿಡಿಯುತ್ತಾನೆ. ಅದು ತನ್ನ ಸಾಂಸ್ಕೃತಿಕ, ರಾಜಕೀಯ ಅಸ್ತಿತ್ವವನ್ನು ಪ್ರಬಲವಾಗಿ ಸ್ಥಾಪಿಸುವುದು ಮತ್ತು ಹಕ್ಕನ್ನು ಪ್ರತಿಪಾದಿಸುವುದೇ ಆಗಿರುತ್ತದೆ. ಹಿಂದಿನ ಕಾಲದಿಂದಲೂ ಈ ರೀತಿಯ ಪ್ರತಿಭಟನೆ ರಾಜಕೀಯ, ಧಾರ್ಮಿಕ, ಸಾಮಾಜಿಕ ನೆಲೆಯಲ್ಲಿ ನಡೆದಿದೆ. ಆದರೂ ಇಂದಿನ ಆಚರಣೆ, ಸಂಪ್ರದಾಯಗಳಲ್ಲಿ ಕಾಣಬಹುದು. ಬಹುಮುಖ್ಯವಾಗಿ ಅದು ಮುಂದೆ ಬರುಬರುತ್ತಾ ಸಾಹಿತ್ಯ ರೂಪದಲ್ಲಿ ದಾಖಲಾಗಿದೆ.

ಪ್ರತಿಭಟನೆಯ ಸ್ವರೂಪವನ್ನು ಮುಖ್ಯವಾಗಿ ಹೀಗೆ ಗ್ರಹಿಸಬಹುದು: ಜಾತಿ ಮೂಲಕವಾಗಿ ಉಂಟಾದ ಸಾಮಾಜಿಕ ಸ್ಥಾನಮಾನದ ವಿರುದ್ಧವಾಗಿದೆ. ಯಾವುದೇ ಬ್ರಾಹ್ಮಣೇತರ ಜಾತಿ ಬ್ರಾಹ್ಮಣರ ವಿರುದ್ಧ ನಡೆಸುವ ಪ್ರತಿಭಟನೆ, ಅದು ಸಾಮೂಹಿಕವಾಗಿ ಅಥವಾ ವೈಯಕ್ತಿಕ ನೆಲೆಯಲ್ಲೂ ವ್ಯಕ್ತವಾಗಬಹುದು. ಕೆಳಜಾತಿ ಅಥವಾ ಜಾತಿಗಳು ಉದ್ಯೋಗದ ಮುಖಾಂತರ ಮೇಲೆ ಬರಲು ನಡೆಸುವ ಪ್ರತಿಭಟನೆ ಆಗಬಹುದು. ಜಾತಿಪದ್ಧತಿಯ ಅನಿಷ್ಟವನ್ನು ನಾಶಮಾಡುವ ಆಶಯದಿಂದ ರೂಪಿತವಾದ ಕಲಾಕೃತಿಯೊಳಗಿನ ಸಂಯೋಜನೆ ಮತ್ತು ಆಶಯ ಇರಬಹುದು. ಅಸ್ಪೃಶ್ಯರು ಸಂಘಟಿತರಾಗಿ ಎಲ್ಲಾ ವರ್ಣ–ಜಾತಿಗಳ ವಿರುದ್ಧ ನಡೆಸುವ ಹೋರಾಟ ಆಗಬಹುದು. ಮಹಿಳೆಯರು ಧರ್ಮ ಮತ್ತು ಸಂಪ್ರದಾಯದ ಚೌಕಟ್ಟನ್ನು ಮೀರಿ ಕಾರ್ಯೋನ್ಮುಖರಾಗುವುದು ಹಾಗೂ ಅಂತಹ ಆಶಯವನ್ನು ಕೃತಿಯಲ್ಲಿ ತರುವುದು. ಯಾವುದೇ ಜಾತಿ ತನಗಿಂತ ಮೇಲು ಜಾತಿಯ ವಿರುದ್ಧ ಶೂದ್ರ–ಶೂದ್ರರ ಮಧ್ಯದಲ್ಲಿ ಜಾತಿ ಮೂಲವಾದ ಮೇಲು ಕೀಳುಗಳಿಗಾಗಿ ನಡೆಸುವ ಪ್ರತಿಭಟನೆ ಆಗಿರಬಹುದು. ಈ ಎಲ್ಲಾ ಆಯಾಮಗಳಲ್ಲೂ ಒಂದಲ್ಲ ಒಂದು ಪ್ರತಿಭಟನೆಯ ಧೋರಣೆಗಳು ಕನ್ನಡ ಸಾಹಿತ್ಯದಲ್ಲಿ ಹುದುಗಿವೆ.

೧೦ನೇ ಶತಮಾನದಲ್ಲಿ ಪಂಪನು ಒಂದು ವ್ಯವಸ್ಥೆಯೊಳಗೆ ನಿಯಂತ್ರಿಸಲ್ಪಟ್ಟಿದ್ದರೂ ತನ್ನ ಕಾವ್ಯದಲ್ಲಿ ಆ ಪರಿಧಿಯನ್ನು ಮೀರುತ್ತಾನೆ. ಅರ್ಜುನನನ್ನು ವೈಭವೀಕರಿಸಲೇಬೇಕಾದ ಸಂದರ್ಭದಲ್ಲಿ ಕರ್ಣನನ್ನು ಕುರಿತು–

> "ಚಂ॥ ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ
> ನೆನವೊಡೆ ಕರ್ಣನಂ ನೆನೆಯ, ಕರ್ಣನೊಳಾರ್ ದೊರೆ ಕರ್ಣನೇಱು ಕ
> ರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ
> ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ"[೧]

ಈ ಪದ್ಯದಲ್ಲಿ ಪಂಪನು ಕರ್ಣನ ಗುಣಗಾನ ಮಾಡುತ್ತಾನೆ. ಕವಿಗೆ ಕರ್ಣ ಇಷ್ಟು ಆಪ್ತನಾಗಿರುವ ಕಾರಣ ಅವನ ಗುಣಗಳು; ಅವು ಈ ಪದ್ಯದಲ್ಲಿ ಉಕ್ತವಾದ ಗುಣಗಳೇ; ಅಂದರೆ ಚಲ, ಚಾಗ, ಅಳವು, ಕಲಿತನ, ನನ್ನಿ ಇವುಗಳೇ. ಹಲವಾರು ಶ್ರೇಷ್ಠ ಗುಣಗಳ ಆಗರವಾಗಿದ್ದ ಕರ್ಣ ಒಂದು ರೀತಿಯಲ್ಲಿ ಪಂಪನ ವೀರಮಾದರಿ. ಹಾಗಾಗಿ ಈ ಪದ್ಯದಲ್ಲಿ ಪ್ರಭುತ್ವಕ್ಕೆ ತೋರುವ ಪ್ರತಿಭಟನೆ ಮತ್ತು ಉಪೇಕ್ಷೆಗೆ ಒಳಗಾದ ವ್ಯಕ್ತಿಯನ್ನು ಎತ್ತಿ ತೋರಿಸುವ ಈ ಎರಡು ಆಯಾಮಗಳನ್ನು ಗುರುತಿಸಬಹುದು.

೧೨ನೇ ಶತಮಾನದ ಸಂದರ್ಭದಲ್ಲಿ ವಚನ ಚಳುವಳಿ ತನ್ನ ಪ್ರತಿಭಟನೆಯನ್ನು ದಾಖಲಿಸುತ್ತ, ಸಂಸ್ಕೃತಭೂಯಿಷ್ಠ ಭಾಷೆಯನ್ನು ನಿರಾಕರಿಸಿ ತಮ್ಮ ಅಭಿವ್ಯಕ್ತಿಗೆ ಜನಸಾಮಾನ್ಯರ ಭಾಷೆಯನ್ನು ಬಳಸಿದರು. ಅದು ದೇಸಿ ಭಾಷೆ. ಅಲ್ಲದೇ ಜಡ್ಡುಗಟ್ಟಿದ ಪರಂಪರೆಯ ಜೊತೆ ಸಂಘರ್ಷ ಮಾಡಿತು. ಕುಳಿತು ಉಣ್ಣುವವರಿಗೆ ಕಾಯಕದ ತತ್ವವನ್ನು ಹೇಳಿಕೊಟ್ಟಿತು. ಪುರಾಣ ಶಾಸ್ತ್ರಗಳ ಪಾವಿತ್ರ್ಯತೆಯನ್ನು ಪ್ರಶ್ನಿಸಿತು. ಅದರ ಭಾಗವಾಗಿರುವ ಅಂಬಿಗರ ಚೌಡಯ್ಯನ ಒಂದು ವಚನ ಹೀಗಿದೆ:

ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ
ಹೊಟ್ಟೆಯಡಿಯಾಗಿ ಬೀಳುವ ಲೊಟ್ಟೆ ಮಾನವರ ಕಂಡರೆ
ಮೆಟ್ಟಿದ ಎಡ ಎಕ್ಕಡ ತಕ್ಕೊಂಡು ಲೊಟ ಲೊಟನೆ
ಹೊಡೆ ಎಂದ ಅಂಬಿಗರ ಚೌಡಯ್ಯ

ಭಾರತೀಯ ಪರಂಪರೆಯಲ್ಲಿ ಚಾತುರ್ವರ್ಣ ವ್ಯವಸ್ಥೆಯ ಕ್ರೂರತೆಗೆ ಸಿಕ್ಕು ನರಳಿದ ಜನ ತಮ್ಮ ಮೇಲಿನ ದೌರ್ಜನ್ಯವನ್ನು ಪ್ರತಿಭಟಿಸಲು ಹಿಂದಿನ ಕಾಲದಿಂದಲೂ ಹಲವಾರು ಮಾರ್ಗಗಳನ್ನು ತುಳಿದಿದ್ದಾರೆ. ಅದು ಭಾಷೆಯ ದೃಷ್ಟಿಯಿಂದ ಇರಬಹುದು, ಆಚ–'ರಣೆಯ ದೃಷ್ಟಿಯಿಂದ ಇರಬಹುದು. ಅನೇಕ ಬಗೆಯಲ್ಲಿ ನಮ್ಮೊಳಗೆ ವ್ಯಾಪಿಸಿರುವ ಈ ಪ್ರತಿಭಟನೆಯನ್ನು ಆಧುನಿಕ ಕಾಲದ ಸಂದರ್ಭದಲ್ಲಿ ಸ್ವಾತಂತ್ರ್ಯನಂತರ ಅಕ್ಷರ ಕಲಿತ ದಲಿತಲೋಕ ಹೇಗೆ ದಾಖಲಿಸಿತು ಎನ್ನುವುದು ಮುಖ್ಯ ಅಂಬೇಡ್ಕರ್, ಮಾರ್ಕ್ಸವಾದ, ಸಮಾಜವಾದಗಳ ಚಿಂತನೆಗಳ ನೆರಳಲ್ಲಿ ದಲಿತ ಮತ್ತು ಬಂಡಾಯ ಸಾಹಿತ್ಯ 'ಪ್ರತಿಭಟನಾ ಸಾಹಿತ್ಯ'ವಾಗಿ ಹೊರಹೊಮ್ಮಿತು. ಇದಕ್ಕೆ ಅಂದಿನ ರಾಜಕೀಯ, ಸಾಮಾಜಿಕ ಸನ್ನಿವೇಶಗಳು ಕಾರಣವಾಗಿವೆ ಮತ್ತು ಚರಿತ್ರೆಯ ಅನಿವಾರ್ಯತೆ ಕೂಡ ಆಗಿದೆ.

೧೯೭೦ರ ದಶಕದಲ್ಲಿ ಸಾಹಿತ್ಯ ಚಳುವಳಿಯನ್ನು ನಡೆಸಿದ ದಲಿತ ಬಂಡಾಯ ಚಳುವಳಿಗಾರರು ಇದುವರೆಗೆ ಇದ್ದ ಸಾಹಿತ್ಯದ ಚೌಕಟ್ಟನ್ನು ಬದಲಿಸಿ ಅದರ ವ್ಯಾಪ್ತಿಯನ್ನು ವಿಸ್ತರಿಸಿತು. ಈ ಸಮುದಾಯ ಮೊದಲು ದಾಖಲಿಸಿದ್ದು ತಮ್ಮ ನೆನಪುಗಳನ್ನು ತಮ್ಮ ಜಾತಿ, ಹೆಸರು, ಊರುಗಳ ಕಾರಣದಿಂದ ಅವಮಾನಿತರಾಗುತ್ತಿದ್ದ ಸಂದರ್ಭದಲ್ಲಿ ಅದೇ ಜಾತಿ, ಊರು, ಹೆಸರುಗಳ ಮೂಲಕ ಸಾಹಿತ್ಯದಲ್ಲಿ ತಮ್ಮ ಪ್ರತಿಭಟನೆಯನ್ನು ದಾಖಲಿಸಿತು. ಸಾಹಿತ್ಯವನ್ನು ಲೌಖಿಕ ಉದ್ದೇಶಕ್ಕಾಗಿ ದುಡಿಸಿಕೊಂಡಿತು. ಭಾಷೆಯ ಮಡಿವಂತಿಕೆಯಿದ್ದ ಕಾಲದಲ್ಲಿ ತನ್ನ ಆಡುಭಾಷೆಯನ್ನೆ ಸಾಹಿತ್ಯದ ಅಭಿವ್ಯಕ್ತಿಯನ್ನಾಗಿ ಮಾಡಿಕೊಂಡಿದ್ದು. ಅ ಮೂಲಕ ದಲಿತ ಭಾಷೆಯ ಕಡೆಗೆ ಎಲ್ಲರನ್ನೂ ತಿರುಗಿ ನೋಡುವಂತೆ ಮಾಡಿತು. ಕಲ್ಲು–ಮಣ್ಣು, ಬೆಟ್ಟ–ಗುಡ್ಡ, ಸೂರ್ಯ–ಚಂದ್ರಗಳನ್ನು ಅಲೌಕಿಕ ನೆಲೆಗೆ ಏರಿಸಿ ಜೀವವಿರೋಧ ನಿಲುವುಗಳಿಂದ ಸಮುದಾಯವನ್ನು ವಂಚಿಸಿದ್ದ ಸಂಸ್ಕೃತಿಯಿಂದ ಅವುಗಳನ್ನು ವಾಸ್ತವಕ್ಕೆ ಎಳೆದು ತಂದಿತು.

ಸ್ವಾತಂತ್ರ, ನಂತರದ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಕಲ್ಪನೆಗಳ ಹುಸಿಯಾಗತೊಡಗಿದಾಗ ಭ್ರಮನಿರಸನವಾಗದೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿ ಸಾಮಾಜಿಕ ಬದುಕಿನ ಸಂಘರ್ಷವನ್ನು ದಾಖಲಿಸಿದೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಆಗ್ರಹಿಸಿದೆ. ದಲಿತ ಬಂಡಾಯ ಸಾಹಿತ್ಯದಲ್ಲಿ ಪ್ರತಿಭಟನೆಯು ಪ್ರಭುತ್ವಕೇಂದ್ರಿತ ಅಧಿಕಾರ ಮತ್ತು ಪರಂಪರೆಯ ಪಾವಿತ್ರ್ಯತೆಯ ವಿರುದ್ಧ ಇರುವುದನ್ನು ಕಾಣಬಹುದಾಗಿದೆ. ಈ ಪ್ರತಿಭಟನೆ ಎನ್ನುವುದು ಇಲ್ಲಿ ಬಿಡುಗಡೆಯ ಹಂಬಲವಾಗಿದೆ.

ಕುಂ. ವೀರಭದ್ರಪ್ಪನವರ ಸಾಹಿತ್ಯದಲ್ಲಿ ದಲಿತ ಸಮುದಾಯ ಕೇವಲ ಶೋಷಣೆಗೆ ಒಳಪಟ್ಟು ಅಸಹಾಯಕತೆಯನ್ನು ತೋರ್ಪಡಿಸದೆ ದಿಟ್ಟವಾಗಿ ಎದುರಿಸುವ, ಪ್ರಭುತ್ವಕ್ಕೆ ಪ್ರತಿರೋಧವನ್ನು ಒಡ್ಡುವ ನೆಲೆಯದ್ದಾಗಿದೆ. ಮುಂದಿನ ತಲೆಮಾರಿಗೆ ಭರವಸೆಯ ಆಶಾಕಿರಣವನ್ನು ಹೊತ್ತಿಸುವಂತದ್ದು. ಪ್ರತಿಸಂಸ್ಕೃತಿಯ ನೆಲೆಯಲ್ಲಿ ಪ್ರಧಾನ ಎಂದು ಗುರುತಿಸಿಕೊಂಡಿರುವ ಸಂಸ್ಕೃತಿ ಅಥವಾ ವ್ಯವಸ್ಥೆ ಎದುರು ತಿಳಿಹಾಸ್ಯದ ಮೂಲಕ ಲೇವಡಿ ಮಾಡಿ ತಮ್ಮ ಪ್ರತಿಭಟನೆಯನ್ನು ಅವರ 'ಬೇಲಿಯ ಹೂಗಳು' ಮತ್ತು 'ಕೊಟ್ರೇಶಿ ಕನಸು' ಕಾದಂಬರಿಗಳಲ್ಲಿ ದಾಖಲಿಸುತ್ತದೆ. ಹಾಗಾಗಿ ಅವರ ಈ ಎರಡು ಕಾದಂಬರಿಗಳಲ್ಲಿ ಪ್ರತಿಭಟನೆಯ ಸ್ವರೂಪವನ್ನು ಇಲ್ಲಿ ಚರ್ಚಿಸಲಾಗಿದೆ.

೨

ಕುಂ. ವೀರಭದ್ರಪ್ಪ ಅವರ ಕಾದಂಬರಿಗಳಲ್ಲಿ ತಳಸಮುದಾಯ ಕೇವಲ ಭಾವನಾತ್ಮಕ ನೆಲೆಯಲ್ಲಿ ಕಳೆದು ಹೋಗದೆ ಎಚ್ಚರಿಕೆಯನ್ನು ಸದಾ ಕಾಯ್ದುಕೊಂಡಿರುತ್ತದೆ. 'ಬೇಲಿಯ ಹೂಗಳು' ಕಾದಂಬರಿಯು ಪ್ರಮುಖವಾಗಿ ಜೀತಪದ್ಧತಿಯಿಂದ ಬಿಡುಗಡೆ ಬಯಸುವ ಸಮುದಾಯ ದಾಖಲಿಸುವ ಪ್ರತಿಭಟನೆ ಆಗಿದೆ. ಇಲ್ಲಿ ಮೂರು ತಲೆಮಾರುಗಳನ್ನು ಕಾಣಬಹುದು. ಕಾಡಜ್ಜ, ಕರಿಲಿಂಗ, ಕರಿಯ, ಕಾಡಜ್ಜ ವ್ಯವಸ್ಥೆಯೊಂದಿಗೆ ಅನಿವಾರ್ಯವಾಗಿ ಹೊಂದಾಣಿಕೆ ಮಾಡಿಕೊಂಡವ ಮತ್ತು ಎಷ್ಟೋ ಜೀತದಾಳುಗಳ ಕೊಲೆಗೆ ಕಾರಣನಾದವನು. ಆದರೆ ಕೊನೆಯಲ್ಲಿ ಅದರ ಪಾಪಪ್ರಜ್ಞೆ ಕಾಡುತ್ತದೆ. ಈ ಕಾದಂಬರಿಯಲ್ಲಿ ಕರಿಲಿಂಗನ ಪಾತ್ರ ಮಿಂಚಿ ಮರೆಯಾಗುತ್ತದೆ. ಆದರೂ ತನ್ನ ಪ್ರತಿಭಟನೆಯನ್ನು ಪ್ರಬಲವಾಗಿ ದಾಖಲಿಸಿ ಸಾಯುತ್ತಾನೆ. ಇದು ಈ ಪಾತ್ರದ ವಿಶೇಷ.

ಕರಿಲಿಂಗ ಮತ್ತು ಕರಿಯನ ನಡುವೆ ಕಾಲದ ದೃಷ್ಟಿಯಿಂದ ಬಹಳ ವ್ಯತ್ಯಾಸ ಮತ್ತು ಪರಿಣಾಮಗಳಿವೆ. ಇಲ್ಲಿ ಕರಿ ಅಥವಾ ಕಪ್ಪು ಎಂದರೇನೆ ದಲಿತ ಬಂಡಾಯ ಚಳುವಳಿಯ ಸಂದರ್ಭದಲ್ಲಿ 'ಕಪ್ಪು'ಗೆ ತಂದುಕೊಟ್ಟ ಆತ್ಮಾಭಿಮಾನವಾಗಿದೆ. ಕಪ್ಪು ಧೈರ್ಯ, ಸಾಹಸ, ಶ್ರಮ, ಸಂಸ್ಕೃತಿಯ ಸಂಕೇತ ಕೂಡ. ಇಲ್ಲಿ ಕರಿಲಿಂಗನದು ಪ್ರಭುತ್ವಕ್ಕೆ ಒಡ್ಡುವ ತೀವ್ರತರದ ಪ್ರತಿಭಟನೆ. ಆದರೂ ಬಹುಬೇಗನೆ ಅದರ ಬಿಗಿ ಬಂಧನಕ್ಕೆ ಸಿಲುಕಿ ಅಸಹಾಯಕತೆಗೆ ತಲುಪಿ ಬಿಡುತ್ತದೆ. ಸ್ವತಂತ್ರ ಭಾರತದ ಆಡಳಿತ ವ್ಯವಸ್ಥೆಯ ಆಸರೆ ಬಯಸಿದರೂ ಅದು ಸಿಗುವುದಿಲ್ಲ. ಕರಿಲಿಂಗ ಮುಂದಿನ ತಲೆಮಾರಿನ ಮೂಲಕವಾದರೂ ಸಮುದಾಯದ ಬಿಡುಗಡೆಯನ್ನು ಬಯಸುತ್ತಾನೆ.

"ನನ್ನ ಮಗನನ್ನು ಸಾಕಿ ಉಲೀ, ಉಲೀ ಮಾಡಿ ದೊರೆ ಮಾಂಸ ತಿನ್ನಿಸ್ತೀನಿ"[೨] ಎನ್ನುವಂತದ್ದು ಮತ್ತು ಕರಿಲಿಂಗನ ಹೆಂಡತಿ ಊರಮ್ಮನ ಆಶಯಗಳು, "ಆಕಾಶದಲ್ಲಿ ಸ್ವಚ್ಛಂದವಾಗಿ ಅಲೆಯುವ ಪಕ್ಷಿ ಕರಿಯಾದರೆ...! ಕಾಡಿನಲ್ಲಿ ಸ್ವಚ್ಛಂದವಾಗಿ ಅಂಡಲೆಯುವ ಸೊಕ್ಕಿದಾನೆ ಕರಿಯನಾದರೆ?!"[೩] ಎಂಬ ಮಾತುಗಳು. ಕರಿಲಿಂಗ ತಾನು ಅನುಭವಿಸಿದ ಎಷ್ಟೋ ನೋವುಗಳ ನಂತರ, ಕ್ರೌರ್ಯದ ಸಾಕಾರ ರೂಪವೇ

ದೊರೆ. ಅವನ ಮುಖಕ್ಕೆ ಉಗಿಯಬೇಕೆಂದು ಗಂಟಲು ಕಫವನ್ನು ಕೀಳುವ ಪ್ರಯತ್ನ ನಡೆಸಿ ಕರಿಲಿಂಗ ವಿಫಲನಾದರೂ ತನ್ನ ಈ ಆಶಯದ ಕನಸನ್ನು ಮುಂದಿನ ತಲೆಮಾರಿಗೆ ವರ್ಗಾಯಿಸುತ್ತಾನೆ.

ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳು ನಿರ್ಮಿಸುತ್ತಾ ಬಂದಿರುವ ಶೋಷಕ ಪರಂಪರೆಯ ಬಗ್ಗೆ ಈ ಕಾದಂಬರಿಯು ಸಿಟ್ಟಿನಿಂದಲೇ ಮಾತನಾಡುತ್ತದೆ. ಜೀತಗಾರರ ಕುಂಡಿಗೆ ಒತ್ತುವ 'ಹಂದಿ ಗುರ್ತಿನ ಮೊಹರು' ರಾಜ ಪ್ರಭುತ್ವವೊಂದು ನಿರ್ಮಿಸುತ್ತಿರುವ ಶೋಷಕ ಪರಂಪರೆಯನ್ನು ಸಂಕೇತಿಸಿದರೇ ಧರ್ಮಸಾಗರಕ್ಕೆ ಬಂದ ಧರ್ಮಗುರುಗಳ ಬಗ್ಗೆ ಸಾಮಾನ್ಯನೊಬ್ಬ 'ಅವನ್ಯಾವನಯ್ಯ ಸ್ವಾಮಿ..' ಎನ್ನುವ ತಿರಸ್ಕಾರದ ವ್ಯಂಗ್ಯದ ಮಾತುಗಳಲ್ಲಿ ಧಾರ್ಮಿಕ ಶೋಷಣೆಯ ಹಿಡಿತವನ್ನು ಒಡೆದುರುಳಿಸುವ ಪ್ರಜ್ಞೆ ಪ್ರಕಟವಾಗಿದೆ. ಹಿಂದಿನ ಸ್ಥಿತಿಯ ಅರಿವಿದ್ದ ಹೊಸ ತಲೆಮಾರು ತಕ್ಷಣಕ್ಕೆ ತನ್ನ ಶತ್ರುವನ್ನು ಗುರುತಿಸಿಕೊಳ್ಳಬಲ್ಲದು ಮತ್ತು ಪ್ರತಿಕ್ರಿಯಿಸ ಬಲ್ಲದು. ಕರಿಯನ ಪಾತ್ರ ಆ ಬಗೆಯದು.

ಒಂದು ಕಾಲಕ್ಕೆ ಆಡಳಿತ ವರ್ಗವಾಗಿದ್ದ ರಾಕ್ಷಸರನ್ನು ಮತ್ತು ಅವರ ರೂಪಗಳನ್ನು ವಿರೂಪಗೊಳಿಸಿರುವ ಶೋಷಕ ಸಂಸ್ಕೃತಿಯನ್ನು ಮುರಿದು ಕಟ್ಟುವ ಆಶಯ ಕರಿಯನ ಕನಸ್ಸಿನ ಮೂಲಕ ವ್ಯಕ್ತವಾಗಿರುವುದು. ಕರಿಯ ತನ್ನ ಕನಸ್ಸಿನಲ್ಲಿ ರಾಕ್ಷಸನ ವೇಷವನ್ನು ತೊಟ್ಟು ದೇವತೆಗಳ ಸ್ವರ್ಗದ ಚಿನ್ನದ ಬಾಗಿಲನ್ನು ಎಡಗಾಲಿನಿಂದ ಒದೆಯುತ್ತಾನೆ. ಕೀಳು ಎಂಬ ಮನೋಭಾವಕ್ಕೆ ಒಳಗಾಗಿರುವ ರಾಕ್ಷಸ ಮತ್ತು ಎಡ ಎನ್ನುವಂತದ್ದು ಇಲ್ಲಿ ಪ್ರತಿಭಟನೆಗೆ ಪ್ರಮುಖ ಅಸ್ತ್ರವಾಗಿದೆ. ತಮ್ಮನ್ನು ಶೋಷಣೆಗೆ ನೂಕುವ ಅಲೌಖಿಕದ ತಿರಸ್ಕಾರ ಮತ್ತು ಪುರಾಣದ ಪಾವಿತ್ರ್ಯತೆಯ ಬಗ್ಗೆ ಸಿಟ್ಟಿದೆ. ಪ್ರಭುತ್ವ ಮತ್ತು ಪುರೋಹಿತಶಾಹಿ ಆಡಳಿತವನ್ನು ಮೋಸಗಾರರು ಎಂದು ಧೈರ್ಯವಾಗಿ ಸಾರುವ ಸನ್ನಿವೇಶ ಪ್ರತಿಸಂಸ್ಕೃತಿಯ ನೆಲೆಯಲ್ಲಿ ದ್ರೋಣಾಚಾರ್ಯ ಮತ್ತು ರಾಜರು ಸೇರಿಕೊಂಡು ಏಕಲವ್ಯನ ಹೆಬ್ಬೆರಳನ್ನು ದೌರ್ಜನ್ಯದಿಂದ ಕತ್ತರಿಸಿಬಿಟ್ಟರು ಎಂದು ದಾಖಲಿಸುತ್ತದೆ. ಇದು ದಲಿತ–ಬಂಡಾಯದ ಸಂದರ್ಭದಲ್ಲಿ ಅಂತರ್ಜಾತಿ ಗಂಡು–ಹೆಣ್ಣುಗಳ ಸಂಬಂಧವು ಪಾವಿತ್ರ್ಯನಾಶದ ಪ್ರತಿಭಟನೆ, ಅಲ್ಲದೇ ಸಮಾನ ಮನಸ್ಸುಗಳನ್ನು ಒಂದು ಮಾಡುವ ಆಶಯವಾಗಿದೆ.

ಕರಿಯ ನಾರಾಯಣ ದೊರೆಯ ಜೀತದಾಳಾಗಿದ್ದರೂ ದೊರೆ ಮಗಳು ಹೊನ್ನಿಯನ್ನು ಪ್ರೀತಿಸುತ್ತಾನೆ. ಅವಳೂ ಪ್ರೀತಿಸುತ್ತಾಳೆ. "ಅವನ ಜೊತೆಗಿನ ತನ್ನ ಅನುಪಮ ಪ್ರೇಮದಲ್ಲಿ ತನ್ನ ಬದುಕಿನ ಸಾರ್ಥಕತೆಯನ್ನು ಕಾಣಲೆತ್ನಿಸುವ ಹೊನ್ನಿಯ ಬದುಕು ಕರಿಯನ ಬಂಡಾಯದ ಇನ್ನೊಂದು ರೂಪವೇ ಆಗಿದೆ."[೪] ಪ್ರಕೃತಿ ಯಾವಾಗಲೂ ಸಮಾನ ಮನಸ್ಸುಗಳನ್ನು ಬೆಸೆಯುವ ಕೆಲಸ ಮಾಡಿದರೆ ಅಧಿಕಾರಕೇಂದ್ರಿತ ವ್ಯವಸ್ಥೆ ಅದನ್ನು ಒಡೆಯುವಲ್ಲಿ ಯಶಸ್ವಿಯಾಗುತ್ತದೆ. ಕೊನೆಯಲ್ಲಿ ಆ ವ್ಯವಸ್ಥೆಗೆ ಈ ಇಬ್ಬರೂ ಬಲಿಯಾಗುತ್ತಾರೆ. ಆದರೆ ಅವರ ಆಶಯಗಳು ಮಾತ್ರ ಈಗಲೂ ಜೀವಂತವಾಗಿಯೇ ಇವೆ.

ಕುಂ. ವೀರಭದ್ರಪ್ಪನವರ ಬಹುತೇಕ ಕಥೆ ಕಾದಂಬರಿಗಳಲ್ಲಿ ನಾಯಿಯ ಮೂಲಕ ಪ್ರತಿಭಟನೆಯನ್ನು ದಾಖಲಿಸುತ್ತಾರೆ. ನಾಯಿ ಕೇವಲ ನಾಯಿಯಾಗಿರುವುದಿಲ್ಲ. ಅದಕ್ಕೆ ಹುಲಿಯ ಎಂತಲೂ, ಭೀಮ ಎಂತಲೂ ಹೆಸರುಗಳನ್ನು ಕೊಟ್ಟು ಅವು ಮನುಷ್ಯನ ಪ್ರತಿನಿಧಿಯೇ ಆಗಿರುತ್ತವೆ. ಹುಲಿ ದೊರೆಯ ನಾಯಿಯನ್ನು ಎದುರಿಸುವುದು ಮೇಲ್ಜಾತಿ ಎನಿಸಿಕೊಂಡವರ ಹೆಣ್ಣುನಾಯಿ ಜೊತೆ ಲೈಂಗಿಕ ಸಂಪರ್ಕವನ್ನೇರ್ಪಡಿಸಿ ಅವರನ್ನು ಅದರಿಂದ ಮುಜುಗರಕ್ಕೀಡುಮಾಡುವುದು. 'ಕೊಟ್ರೇಶಿ ಕನಸು'ನಲ್ಲಿ ಹಣಚಿಕ್ಕನಾಯಿಗೆ ಗೌಡರ ಹೆಣ್ಣಾಯಿ ಜೊತೆ ಸಂಬಂಧವಿದೆ. ಅಂದರೆ ತಳಸಮುದಾಯದ ಹೆಣ್ಣುಗಳನ್ನು ಶೋಷಿಸುವುದರ ವಿರುದ್ಧ ಕಟ್ಟಿರುವ ಪ್ರತಿಭಟನೆಯಾಗಿದೆ. ಕುಂವೀಯವರ ಮತ್ತೊಂದು ಕತೆ 'ದೇವರ ಹೆಣ'ದಲ್ಲಿ ನಾಯಿಯ ಮೂಲಕ ದೇವರ ಕಲ್ಲನ್ನು ನೆಕ್ಕಿಸುವುದು ಅಲೌಕಿಕ ನೆಲೆಯ ತಿರಸ್ಕಾರವಾಗಿದೆ. ಇಲ್ಲಿ ಮನುಷ್ಯ ನಿರ್ಮಿತ ಕಟ್ಟುಪಾಡುಗಳು ನಾಯಿಗಳಿಗೆ ಅನ್ವಯಿಸುವುದಿಲ್ಲ. ಅವು ಸ್ವತಂತ್ರ ಮತ್ತು ಸಮಾನರು ಎಂಬ ಭಾವನೆಯಿದೆ. ಇದರಿಂದಾಗಿ ಮನುಷ್ಯ ನಿರ್ಮಿತಿಗಳನ್ನು ಇಲ್ಲಿ ಅಣಕ ಮಾಡಲಾಗಿದೆ.

ಪ್ರಭುತ್ವ ಯಾವಾಗಲೂ ಶ್ರಮಜೀವಿಗಳ ಮೇಲೆ ಅವಲಂಬಿಸಿರುತ್ತದೆ. ಈ ಶ್ರಮಜೀವಿಗಳು ತಿರುಗಿಬಿದ್ದರೆ ಪ್ರಭುತ್ವದ ಬುಡ ಅಲುಗಾಡುತ್ತದೆ. ಈ ಕಾರಣಕ್ಕಾಗಿ ದೊರೆಯ ಹತ್ತಿರ ಕೆಲಸ ಮಾಡುವ ಜೀತದಾಳುಗಳು ತಿರುಗಿ ಬೀಳುತ್ತಾರೆ. ಆ ಜಾಗಕ್ಕೆ ಪೆಂಟೆಗಲ್ಲಿನ ಕೊಲೆಗಡುಕರನ್ನು ದೊರೆ ಕರೆಯಿಸಿದಾಗಲೂ ಅವರು ಮಾಡುವ ಲೂಟಿಯಿಂದ ಜನರು ದೊರೆಯ ವಿರುದ್ಧ ತಿರುಗಿಬೀಳುತ್ತಾರೆ. ಪ್ರತಿಭಟನೆ ಇನ್ನಷ್ಟು ತೀವ್ರಗೊಳ್ಳುತ್ತದೆ. ತಳಸಮುದಾಯದ ಪ್ರತಿಭಟನೆಯು ಪ್ರಮುಖವಾಗಿ ದಾಖಲಾಗುವುದು ಭಾಷಿಕ ನೆಲೆಯಲ್ಲಿ. ದೊರೆ ಎದುರಿಗೆ ಕರಿಯ ಎದೆ ಸೆಟೆದು ನಡೆಯುವುದು, ಸಮಾಜವಾದಿ ಹೋರಾಟದ ಪರಿಣಾಮವಾಗಿದೆ. ಭದ್ರಪ್ಪ ಸಾವಿನ ಸಂದರ್ಭದಲ್ಲೂ ದೊರೆಗೆ 'ಥೂ ನಾಯಿ' ಅಂತ ಮುಖಕ್ಕೆ ಉಗುಳುವುದು ಮತ್ತು ಪರಮೇಶಿಯ ನಗುಮುಖ ನೋಡಿದಾಗ ದೊರೆಗೆ ಹೆದರಿಕೆಯಾಗುವುದು. ಇವುಗಳು ದೊರೆ ಇಷ್ಟು ದಿನ ಅಂದುಕೊಂಡಿದ್ದನ್ನು ಭಂಜಿಸುತ್ತದೆ. ಆ ಕಾರಣಕ್ಕಾಗಿ ಆಂಗಿಕ ಚಲನೆಗಳು ಬದಲಾಗುತ್ತವೆ.

ದೊರೆಯ ಅಥವಾ ಅಧಿಕಾರ ಕೇಂದ್ರಿತ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವಂತೆ ಚಳುವಳಿಯನ್ನು ರೂಪಿಸುವವನು ಪರಮೇಶಿ ಎಂಬ ಆಶುಕವಿ. "ಪರಮೇಶಿಯ ಲೆಕ್ಕಾಚಾರದಲ್ಲಿ ಏಕಲವ್ಯ ತನ್ನ ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆ ರೂಪದಲ್ಲಿ ಸ್ವ– ಇಚ್ಚೆಯಿಂದ ಕೊಟ್ಟಿಲ್ಲವಂತೆ, ದ್ರೋಣಾಚಾರ್ಯ ಮತ್ತವರ ಏಕಪಟಾಲಂ ಸೇರಿಕೊಂಡು ಅವನ ಮೇಲೆ ದೌರ್ಜನ್ಯ ನಡೆಸಿ ಅವನ ಹೆಬ್ಬೆರಳನ್ನು ಕತ್ತರಿಸಿಬಿಟ್ಟಿರುವರಂತೆ. ಅಂದರೆ ದ್ರೋಣಾಚಾರಿ ಶುದ್ಧ ಮೋಸಗಾರ, ರಾಜರು ಮೋಸಗಾರರು" ಎನ್ನುತ್ತಾನೆ.[೫] ಪುರಾಣಗಳನ್ನು ಮರುವ್ಯಾಖ್ಯಾನಿಸುವ ದೇಸೀಯ ಅರಿವು ಇಲ್ಲಿ ಎದ್ದು ಕಾಣುತ್ತದೆ.

ಅಮೇರಿಕಾದ ನೀಗ್ರೋಗಳು ತಮ್ಮ ಮೇಲೆ ನಡೆಯುವ ಬಿಳಿಯರ ದೌರ್ಜನ್ಯದಿಂದ ಹೇಗೆ ಸಂಘಟಿತರಾದರು 'ಸ್ಪಾರ್ಟಕಸ್' ಗುಲಾಮರನ್ನೆಲ್ಲ ಹೇಗೆ ಸಂಘಟಿಸಿ ಆಳುವವರ ವಿರುದ್ಧ ತಿರುಬಿದ್ದನು ಎಂಬುದನ್ನು ವಿವರಿಸಿ ಪರಮೇಶ ದೊರೆಯ ವಿರುದ್ಧ ಜನಗಳನ್ನು ಸಂಘಟಿಸುತ್ತಾನೆ. ಹಾಡುಗಳ ಮೂಲಕ ಜಾಗೃತಿಯನ್ನು ಮೂಡಿಸುತ್ತಾನೆ. ೭೦ರ ದಶಕದಲ್ಲಿ ನಡೆದ ಚಳುವಳಿಗಳು ಹೇಗೆ ಜಾನಪದವನ್ನು ತನ್ನ ಚಳುವಳಿಯ ಭಾಗವನ್ನಾಗಿ ಮಾಡಿಕೊಂಡಿತು ಮತ್ತು ಕಪ್ಪು ಪ್ರಜ್ಞೆ ಚಳುವಳಿಯಿಂದಲೂ ಪ್ರಭಾವಗೊಂಡಿದೆ ಎಂಬುದನ್ನು ಈ ಘಟನೆಯಿಂದ ಕಾಣಬಹುದು. ಒಂದು ಚಳವಳಿಯ ನಡೆಗೆ ಪೂರಕವಾಗಿ ಮತ್ತೊಂದು ಚಳವಳಿಯ ಪ್ರಜ್ಞೆ ಜೊತೆಯಾದರೇ ಉದ್ದೇಶಿತ ಗುರಿಯನ್ನು ತಲುಪುವಲ್ಲಿ ಸಹಕಾರಿಯಾಗುತ್ತದೆ. ಕರಿಯ ಮತ್ತು ಹೊನ್ನಿಯರ ಪ್ರೇಮ ಪ್ರಸಂಗದಲ್ಲಿ ಹೊನ್ನಿಯನ್ನು ಉಳಿಸಲು ಕಾಡಿನಿಂದ ಕರಿಯ

ಹಾಲಿಗಾಗಿ ಚಿರತೆಯನ್ನು ತರುವುದು ಮೊದಲಾದ ಕಲ್ಪನೆಗಳು ಜಾನಪದ ಮಿತ್‌ನಂತೆ ಕೆಲಸ ಮಾಡಿವೆ. ಅವು ದೊರೆಯ ವಿರುದ್ಧದ ಪ್ರತಿಭಟನೆಗೆ ಪೂರಕವಾಗಿ ದುಡಿದಿವೆ.

೩

'ಕೊಟ್ರೇಶಿ ಕನಸು' ೧೯೮೩ರಲ್ಲಿ ಪ್ರಕಟವಾಯಿತು. ದಲಿತ–ಬಂಡಾಯ ಚಳುವಳಿಯಿಂದ ಆ ಸಮುದಾಯದಲ್ಲಿ ಜಾಗೃತಿ ಮೂಡುತ್ತಿದೆ. ಕೊಟ್ರ ಅಕ್ಷರ ಕಲಿತಿರುವ ಹೊಸ ತಲೆಮಾರು ೭ನೇ ಕ್ಲಾಸು ಪಾಸಾಗಿದ್ದರೂ ಹೈಸ್ಕೂಲಿಗೆ ಸೇರಲು ಹಿಂಜರಿಯುತ್ತಾನೆ. ಆದರೆ ಅವನ ಅಪ್ಪ ದಿಬ್ಬ ಮಾತ್ರ ನಮ್ದೇನು ದನಕಾಯಾರ ವಂಸ ಅಂದ್ಕಂಡಿಯಾ, ಥೂ... ನಿನ್ನ ಜಲುಮಕ್ಕೆ ಬೆಂಕಿ ಆಕಾ... ಒದ್ದೋನಾಗಿ ಇಂತ ಮಾತಾಡಾದ" ಎನ್ನುತ್ತಾನೆ. ಇಲ್ಲಿ ಕೊಟ್ರೇಶಿ ಕನಸು ಇಡೀ ಶೋಷಿತ ಸಮುದಾಯದ ಬಿಡುಗಡೆಯ ಕನಸೂ ಆಗಿದೆ. ಕೊಟ್ರನ ಅಪ್ಪನ ಈ ಮಾತುಗಳಲ್ಲಿ ತನ್ನ ಕಷ್ಟದ ಬದುಕನ್ನು ಕೊನೆಗಾಣಿಸಿಕೊಳ್ಳುವ ಮತ್ತು ಅದಕ್ಕಾಗಿ ತನ್ನ ಮಗನನ್ನು ತಯಾರು ಮಾಡುವ ತವಕವಿದೆ. ದಿಬ್ಬ ಮತ್ತು ಕೇರಿಯ ಎಲ್ಲರು ಕೊಟ್ರನನ್ನು ತಮ್ಮ ಆಶಾಕಿರಣವಾಗಿ ನೋಡುತ್ತಾರೆ. ಕೊಟ್ರ ದೊಡ್ಡಾಫಿಸ್ಸರಾಗುವುದು ಈ ತಳಸಮುದಾಯಗಳ ಅಪೇಕ್ಷೆ, ಕುಂಬಾರ, ಹೊಲೆಯ, ನಾಯಂದಿಗ, ಕೊರಚ ಈ ಎಲ್ಲ ಸಮುದಾಯಗಳ ಆಶಯ ಒಂದೇ ಕೊಟ್ರ ಹೈಸ್ಕೂಲ್ ಸೇರಬೇಕೆಂಬುದು.

ಕೊಟ್ರ ಹೈಸ್ಕೂಲ್ ಸೇರಲು ಮೊದಮೊದಲು ಹಿಂಜರಿದರು (ಅದು ತನ್ನಲ್ಲಿರುವ ಕೀಳರಿಮೆ ಮತ್ತು ಶಾಲೆಯಲ್ಲಿ ಮೇಲ್ಜಾತಿಯವ–ರಿಂದ ಆಗುವ ಅವಮಾನಗಳಿಗೆ ಹೆದರಿ) ಶಾಲೆಯಲ್ಲಿ ಎದುರಾಗುವ ಸನ್ನಿವೇಶಗಳನ್ನು ಎದುರಿಸಲು ಸಿದ್ಧನಾಗುತ್ತಾನೆ. ಆದರೆ ಜಾತಿಯ ಕಾರಣಕ್ಕಾಗಿ ಹೈಸ್ಕೂಲ್ ಸೇರಲು ಒಂದು ಚಳುವಳಿಯನ್ನೇ ರೂಪಿಸಬೇಕಾಗುತ್ತದೆ. ಕೊಟ್ರ ಅಕ್ಷರ ಕಲಿಯಲು ಹೊರಟ ಮೊದಲ ತಲೆಮಾರಿನ ಹುಡುಗನಾದರೂ, ತವಕ, ತಲ್ಲಣಗಳಾಗಿ ಕಂಡುಬರುತ್ತಾನೆ.

ಈಗಾಗಲೇ ಕೊಟ್ರನ ಹಿಂದಿನ ತಲೆಮಾರಾದ ಹೆಡ್‌ಮಾಸ್ಟರ್ ದುರ್ಗಪ್ಪ, ಮೀಸಲು ವಿಧಾನಸಭಾ ಕ್ಷೇತ್ರದಿಂದ ಎಂ.ಎಲ್.ಎ. ಆಗಿರುವ ಛಲವಾದಿ ಬಸಪ್ಪಗಳಂತವರು ಇದ್ದರೂ ಅವರ ಸ್ಥಿತಿ ಏನು ಭಿನ್ನವಾಗಿಲ್ಲ. ಈ ಸಮಾಜ ಹೆಸರಿನಿಂದಲೇ ಜಾತಿಯನ್ನು ಗುರುತಿಸಿ ಅವಮಾನಿಸಬಲ್ಲದು ಹಾಗಾಗಿ ದುರ್ಗಪ್ಪ, ದುರ್ಗಪ್ರಸಾದ್ ಎಂದು ಹೆಸರು ಬದಲಾವಣೆ ಮಾಡಿಕೊಳ್ಳುತ್ತಾನೆ. ಇದು ಇಂದಿಗೂ ಪ್ರಸ್ತುತವಾಗಿದೆ. ಎಂ.ಎಲ್.ಎ. ಬಸಪ್ಪ ಸ್ವಾಮೀಜಿಗಳ ಆಜ್ಞಾವರ್ತಕ. ಹಾಗಾಗಿ ದಲಿತಸಮುದಾಯದಲ್ಲಿ ಬದಲಾವಣೆಯ ಗಾಳಿ ಬೀಸಿದರೂ, ಮೇಲ್ಜಾತಿ ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಬಯಸುತ್ತದೆ. ಇಂತಹ ಪರಿಸ್ಥಿತಿಗಳಿಗೆ ತಳಸಮುದಾಯದಲ್ಲಿ ಸಾಮೂಹಿಕ ಎಚ್ಚರ ಮತ್ತು ಸಾಮೂಹಿಕ ಪ್ರತಿಭಟನೆ, ಹೋರಾಟ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಚೌಡಪ್ಪ ಹೇಳುವ ಈ ಮಾತುಗಳು ಗಮನಾರ್ಹವಾದವು: "ತಲಾಕೀಟೀಟು ಆಕಿದ್ರೆ ಗೋಡನ ಗಿಡದ ಆಸ್ತೀನ ಕ್ಷಣಕೋಬವ್ದು".

ಈ ಕಾದಂಬರಿಯು ಕೊಟ್ರನ ಮೂಲಕ ಪಾಪ–ಪುಣ್ಯಗಳನ್ನು, ಅವುಗಳ ಮಾದರಿಯನ್ನು, ಪಾವಿತ್ರ್ಯತೆಯನ್ನು ಮುರಿದುಹಾಕುತ್ತದೆ. ಕೊಟ್ರನ ಅವ್ವ ನಾಗವ್ವ ದೇವಸ್ಥಾನದ ಕೊಳೆತ ನೀರಿನಲ್ಲಿ ಸ್ನಾನ ಮಾಡುವಾಗ ಕೊಟ್ರ ಆಡುವ ಮಾತುಗಳು ಇವು: "ಯಿಂಥಾ ನೀರ್ನಾಗೆ ಸಾನ ಮಾಡಾಕೆ ನೀನಾಗ್ಲಿ ಯಂಥ ಪಾಪಾನೂ ಮಾಡಿಲ್ಲ ಕಣವ್ವೋ" ಎನ್ನುವುದು. ಇಲ್ಲಿ ಜಿಡ್ಡುಗಟ್ಟಿದ ಈ ತರಹದ ಸಂಪ್ರದಾಯದಿಂದ ಕೊಟ್ರನ ಮನಸ್ಸು ಬಿಡುಗಡೆಯನ್ನು ಬಯಸುತ್ತಿರುವುದನ್ನು ಕಾಣಬಹುದು.

ಕೊಟ್ರ ಮತ್ತು ದಿಬ್ಬ ಪಂಡಿತರ ಮನೆಗೆ ಸಹಾಯ ಕೇಳಲು ಹೋದಾಗ ಪಂಡಿತನ ಮನೆಮುಂದೆ "ನಾಯಿಗಳಿವೆ ಎಚ್ಚರಿಕೆ' ಎನ್ನುವಂತಹ ಬೋರ್ಡು, ದಿಬ್ಬನ ನೆಲೆಯಲ್ಲಿ ನೋಡಿದಾಗ ಅಲ್ಲಿನ ಪಂಡಿತರಿಗೆ ಆ ಅರ್ಥ ನೇರವಾಗಿ ಸಂಬಂಧಿಸಿದ್ದಾಗಿದೆ. ಅದಕ್ಕಾಗಿಯೇ ದಿಬ್ಬ ಮಗನನ್ನು ಹೊರಗೆಯೇ ಕುಳ್ಳಿರಿಸಿಕೊಳ್ಳುತ್ತಾನೆ. ಮತ್ತು ಕೊಟ್ಟ "ತಾನ್ಯಾಕೆ ಗೌಡರ ಕಾಲಿಗೆ ಬೀಳಬೇಕು ಹೂ" ಎಂದು ಬಹಿರಂಗವಾಗಿಯೇ ಪ್ರತಿಭಟಿಸುತ್ತಾನೆ.

ತಿಮ್ಮಯ್ಯ ಶೆಟ್ಟಿಯು ನಾಗವ್ವನನ್ನು ನೋಡಿ ಅಸಹ್ಯವಾಗಿ ನಕ್ಕಾಗ ನಾಗವ್ವ ಅವನ ಅಸಹ್ಯ ನಗುವಿಗೆ ಮೈಯೆಲ್ಲ ಕಕ್ಕಸು ಮೆತ್ತಿಕೊಂಡಂಥ ಅನುಭವವಾಗಿ ಬಚ್ಚಲಿಗೆ ಹೋಗಿ ಸ್ನಾನಮಾಡುತ್ತಾಳೆ. ನಾಗವ್ವನ ಪ್ರತಿಭಟನೆಯ ನೆಲೆ ತಳಸಮುದಾಯದ ಹೆಣ್ಣುಮಕ್ಕಳಿಗೆ ದಿಟ್ಟತನವನ್ನು ತಂದುಕೊಟ್ಟಿದೆ. ಹುಲಿಗೆಮ್ಮನ ಕವಡೆ ಕಟ್ಟುವುದನ್ನು ಪ್ರತಿಭಟಿಸುವ ರೇಣುಕಾ ಅಸಹ್ಯವಾದ ಶೋಷಕ ಪರಂಪರೆಯಿಂದ ಬಿಡುಗಡೆಗೊಳ್ಳುವ ಹೊಸ ತಲೆಮಾರಿನ ತವಕವಾಗಿ ಕಂಡುಬರುತ್ತಾಳೆ. ಮೇಲು–ಕೀಳು ಎಂಬುದನ್ನು ಅರ್ಥ ಮಾಡಿಕೊಂಡ ಕೊಟ್ರ, ಗೌಡರ ಕೆಳಗೆ ಕುಳಿತುಕೊಳ್ಳು ನಿರಾಕರಿಸುತ್ತಾನೆ. ದೇವಸ್ಥಾನವನ್ನು ಕುರಿತು "ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಇವೆಂಥ ದೇವರುಗಳು" ಎಂದು ಪ್ರಶ್ನಿಸುತ್ತಾನೆ. ಇಲ್ಲಿ ಸಾಂಪ್ರದಾಯಿಕತೆಯನ್ನು ಸಿಥಿಲಗೊಳಿಸಿ ಹೊಸ ಪರಂಪರೆಯ ನಿರ್ಮಾಣದ ಕಡೆ ಕೊಟ್ರನ ಮನಸ್ಸು ತುಡಿಯುತ್ತಿದೆ.

ಇಷ್ಟೆಲ್ಲ ತಿಕ್ಕಾಟ ನಡೆಯುವುದು ಕೊಟ್ರ ಹೈಸ್ಕೂಲಿಗೆ ಸೇರುವುದಕ್ಕೋಸ್ಕರ. ತನ್ನ ಜಾತಿಯ ಕಾರಣದಿಂದ ಅವಕಾಶ ವಂಚಿತನಾಗುತ್ತಿದ್ದಾನೆ. ಇದಕ್ಕೆ ಕಾರಣ ಉಮಾಪತಿ ಎಂಬ ಅಕ್ಷರ ಕಲಿತಿರುವ ಮೇಲ್ವರ್ಗದ ಪ್ರತಿನಿಧಿ. ಈ ರೀತಿಯ ಮೇಲ್ವರ್ಗವನ್ನು ಸಮುದಾಯದ ಎಲ್ಲರು ಒಂದಾಗಿ ಪ್ರತಿಭಟಿಸಿ, ಕೊಟ್ರ ಹೈಸ್ಕೂಲಿಗೆ ಸೇರುತ್ತಾನೆ. ಮೇಲ್ವಾತಿ ಎನಿಸಿಕೊಂಡಿರುವ ವಿದ್ಯಾರ್ಥಿಗಳ ನಡುವೆಯೇ ಕುಳಿತು ಅವರಿಗೆ ಮುಜುಗರ ಉಂಟುಮಾಡುವುದಷ್ಟೇ ಅಲ್ಲ, ನಾನೂ ನಿಮ್ಮಂತೆಯೇ ಎಂಬುದನ್ನು ಹೇಳಿದಂತೆ. ಕೊಟ್ರನ ಇಂತಹ ದಿಟ್ಟ ಪ್ರತಿಭಟನೆಗೆ ಆ ಸಂದರ್ಭದ ರಾಜಕೀಯ ಸನ್ನಿವೇಶವು, ದಲಿತ ಚಳುವಳಿಗಳು, ಸಂವಿಧಾನಾತ್ಮಕ ಸವಲತ್ತುಗಳು ಪೋಷಿಸಿ ಪ್ರಧಾನ ಧಾರೆಗೆ ಬರುವಂತೆ ಮಾಡುತ್ತವೆ.

೪

ಕುಂ. ವೀರಭದ್ರಪ್ಪನವರ 'ಬೇಲಿಯ ಹೂಗಳು' ಮತ್ತು 'ಕೊಟ್ರೇಶಿ ಕನಸು' ಈ ಎರಡೂ ಕಾದಂಬರಿಗಳಲ್ಲಿ ತಳಸಮುದಾಯ ತಮ್ಮ ಸಾಂಸ್ಕೃತಿಕ ಅಸ್ತಿತ್ವದ ಜೊತೆಗೆ ಸಮಕಾಲೀನ ಸವಾಲುಗಳನ್ನು ಎದುರಿಸುವುದು ಮತ್ತು ಅಧಿಕಾರ ಕೇಂದ್ರಿತ ವ್ಯವಸ್ಥೆಯನ್ನು ಹೊಡೆದು ಹಾಕುವುದಾಗಿದೆ. ಇದಕ್ಕಾಗಿ ಮೇಲ್ವರ್ಗ ಹಾಕಿಕೊಟ್ಟಿರುವ ಕೆಲವು ಸಿದ್ಧಮಾದರಿಗಳನ್ನು ಭಂಜಿಸುತ್ತದೆ. ಅದಕ್ಕಾಗಿ ತಾವಿರುವ ಸ್ಥಿತಿಗೆ ಮರುಕವನ್ನು

ಹುಟ್ಟಿಸದೆ, ಅಂದರೆ ಅಸಹಾಯಕತೆಯಲ್ಲೇ ಮುಳುಗಿಹೋಗದೆ, ಪ್ರತಿಭಟನೆಯ ಮೂಲಕ ಚೈತನ್ಯವನ್ನು ಪಡೆದುಕೊಂಡಿದೆ.

'ಬೇಲಿಯ ಹೂಗಳು' ಪ್ಯಾಂಟಸಿಯಂತೆ ಕಂಡುಬಂದರೂ ಆಶಯಗಳಿಗೆ ಹೆಚ್ಚಿನ ಒತ್ತನ್ನು ಕೊಡಲಾಗಿದೆ. ಮುಖ್ಯವಾಗಿ ಈ ಕಾದಂಬರಿಗಳು ಚರಿತ್ರೆ ಮತ್ತು ಪುರಾಣಗಳನ್ನು ಮರುವಿಮರ್ಶೆಗೆ ಒಡ್ಡಿದೆ ಮತ್ತು ಅದರ ಅವಶ್ಯಕತೆಯನ್ನು ಒತ್ತಿ ಹೇಳಿದೆ. ಶೋಷಿತ ಸಮುದಾಯದ ಪ್ರತಿಯೊಬ್ಬನ ಸುಪ್ತ ಮನಸ್ಸಿನಲ್ಲಿರುವ ಅಸಮಾಧಾನ, ನೋವುಗಳು, ಸಿಟ್ಟು, ಸಾಮೂಹಿಕವಾಗಿ ಪ್ರತಿಭಟನೆಯ ಸ್ವರೂಪವಾಗಿ ಹೊರಹೊಮ್ಮಿದರೆ ಸಮಕಾಲೀನ ಸವಾಲುಗಳನ್ನು ಮೆಟ್ಟಿ ನಿಲ್ಲಬಹುದು ಎಂಬುದು ಇಲ್ಲಿ ವ್ಯಕ್ತವಾಗಿದೆ. ಈ ಎರಡೂ ಕಾದಂಬರಿಗಳಲ್ಲಿ ಹೆಣ್ಣುಗಂಡಿನ ಪ್ರೀತಿ ಹಾಗೂ ಅಕ್ಷರ ಕಲಿಕೆ ಇವೆರಡೂ ವ್ಯವಸ್ಥೆಯ ಚೌಕಟ್ಟನ್ನು ಮೀರಿ ಸಂಭವಿಸಿದಾಗ ಹೊಸ ಹುಟ್ಟು ಸಾಧ್ಯವಾಗಿದೆ. ಇದು ಪ್ರತಿಭಟನೆಯ ಭಾಗವಾಗಿ ಬಿಡುಗಡೆಯ ಸಾಧ್ಯತೆಗಳನ್ನು ತೋರಿಸುತ್ತದೆ.

**ಕೊನೆ ಟಿಪ್ಪಣಿಗಳು**

೧. ವಿಕ್ರಮಾರ್ಜುನವಿಜಯಂ, ೧೨–೨೧೭, ಪ್ರೊ. ಟಿ.ವಿ. ವೆಂಕಟಾಚಲಶಾಸ್ತ್ರೀ, ಪಂಪ ಸಂಪುಟ, ಪುಟ. ೬೭೮

೨. ಕುಂ. ವೀರಭದ್ರಪ್ಪ, ಬೇಲಿಯ ಹೂಗಳು, ಪುಟ. ೭

೩. ಅದೇ, ಪುಟ. ೮

೪. ಮನಜ, ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ, ಪು. ೩೧೨

೫. ಕುಂ. ವೀರಭದ್ರಪ್ಪ, ಬೇಲಿಯ ಹೂಗಳು, ಪುಟ. ೧೨೩

**ಪರಾಮರ್ಶನ ಗ್ರಂಥಗಳು**

೧. ಕುಂ.ವೀರಭದ್ರಪ್ಪ, ಬೇಲಿಯ ಹೂಗಳು, ಹೇಮಂತ ಸಾಹಿತ್ಯ, ಬೆಂಗಳೂರು.

೨. ಕುಂ. ವೀರಭದ್ರಪ್ಪ, ಕೊಟ್ರೇಶಿ ಕನಸು, ಸಪ್ನ ಬುಕ್ ಹೌಸ್, ಬೆಂಗಳೂರು.

೩. ವೆಂಕಟಾಚಲಶಾಸ್ತ್ರೀ ಟಿ.ವಿ., ಪಂಪ ಸಂಪುಟ, ವಿಕ್ರಮಾರ್ಜುನವಿಜಯಂ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಮನಜ, ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ, ಸಿದ್ಧಾರ್ಥ ಗ್ರಂಥಮಾಲೆ ಮೈಸೂರು.